# ಹಿಂಸೆ–ಅಹಿಂಸೆ : ಒಂದು ವಿವೇಚನೆ

ಸ್ವಾಮಿ ಜಗದಾತ್ಮಾನಂದ

ಹಿಂಸೆ–ಅಹಿಂಸೆಗಳ ನಡುವಿನ ಧರ್ಮಸೂಕ್ಷ್ಮದ ಕುರಿತು ತಮ್ಮ ಅಮೂಲ್ಯ ಚಿಂತನೆಗಳನ್ನು ತಿಳಿಸಿರುವ ಸ್ವಾಮಿ ಜಗದಾತ್ಮಾನಂದಜಿಯವರು ಹಲವಾರು ಭಾಷೆಗಳಿಗೆ ಅನುವಾದಗೊಂಡಿರುವ "ಬದುಕಲು ಕಲಿಯಿರಿ" ಗ್ರಂಥದ ಮೂಲಕ ಲಕ್ಷಗಟ್ಟಲೆ ಕನ್ನಡದ ಜನಮನವನ್ನು ತಲುಪಿರುವ ಪ್ರಖ್ಯಾತ ಲೇಖಕರಾಗಿದ್ದು ಈಗ ಕೊಡಗು ಜಿಲ್ಲೆಯ ಪೊನ್ನಂಪೇಟೆಯಲ್ಲಿನ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾಗಿದ್ದಾರೆ.

ಹಿಂಸೆ–ಅಹಿಂಸೆಗಳ ಸಮಸ್ಯೆ ನಾವು ತಿಳಿದುಕೊಂಡಷ್ಟು ಸರಳವಲ್ಲ. ಅದು ಸಾಕಷ್ಟು ಸಂಕೀರ್ಣವೂ, ಕ್ಲಿಷ್ಟವೂ, ಸೂಕ್ಷ್ಮವೂ ಆದ ಸಂಗತಿ. ಅಹಿಂಸೆಯು ಸತ್ಯದಂತೆ ಅತ್ಯಂತ ಶ್ರೇಷ್ಠ ಆದರ್ಶ, ಅತ್ಯಂತ ಅನುಸರಣೀಯ ನಡವಳಿಕೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಪ್ರಪಂಚದ ನೂರಾರು ಸಂತರು, ಮಹಾತ್ಮರು ಅಹಿಂಸೆಯನ್ನು ಬೋಧಿಸಿದ್ದಾರೆ. ಸನಾತನ ಹಿಂದೂಧರ್ಮದ ಪ್ರಕಾರ ಅಹಿಂಸೆ ಧರ್ಮದ ಪ್ರಥಮ ಲಕ್ಷಣ. ಅಹಿಂಸೆಯನ್ನು ದೈವೀ ಸಂಪತ್ತೆಂದು ಗೀತೆಯ ೧೬ನೆಯ ಅಧ್ಯಾಯದಲ್ಲಿ ಹೇಳಲಾಗಿದೆ. ಭಗವಾನ್ ಮಹಾವೀರ, ಗೌತಮ ಬುದ್ಧರಂತೂ ಅಹಿಂಸೆಯೇ ಪರಮಧರ್ಮವೆಂದು ಸಾರಿದರು. ಏಸುಕ್ರಿಸ್ತ ತನ್ನನ್ನು ಶಿಲುಬೆಗೆ ಏರಿಸಿದವರನ್ನು ಕ್ಷಮಿಸಿದ. ಒಂದು ಕೆನ್ನೆಗೆ ಏಟು ಕೊಟ್ಟವರಿಗೆ ಇನ್ನೊಂದು ಕೆನ್ನೆ ತೋರಿಸಬೇಕೆಂದ. 'ವಿಷವುಣಿಸಿದವರಿಗೆ ಷಡ್ರಸವನುಣಿಸಲು ಬೇಕು' ಎಂದು ಪುರಂದರದಾಸರು ಹಾಡಿದರು. ಆಧುನಿಕ ಕಾಲದಲ್ಲಿ ಮಹಾತ್ಮಾ ಗಾಂಧಿಯವರು ಅಹಿಂಸೆಯ ಶ್ರೇಷ್ಠತೆಯನ್ನು ಮತ್ತೊಮ್ಮೆ ಇಡೀ ಜಗತ್ತಿನ ಮುಂದೆ ಎತ್ತಿಹಿಡಿದರು. ಆದಾಗ್ಯೂ ಪ್ರಪಂಚದ ಎಲ್ಲ ಭಾಗಗಳಲ್ಲೂ ಹಿಂಸೆ ಅವ್ಯಾಹತವಾಗಿ ನಡೆದು ಬಂದಿದೆ. ಹಿಂಸೆಯನ್ನು ಸಮರ್ಥಿಸುವ, ಪ್ರೋತ್ಸಾಹಿಸುವ ಸಿದ್ಧಾಂತಗಳು, ವಾದಗಳು ಹುಟ್ಟಿಕೊಂಡಿವೆ. ಪ್ರತಿದಿನವೂ ಪ್ರಪಂಚದ ಉದ್ದಗಲಕ್ಕೂ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ, ಭ್ರಷ್ಟಾಚಾರ, ಕೊಲೆ, ದರೋಡೆ, ಗೂಂಡಾಗಿರಿ ಮುಂತಾದ ನಾನಾರೂಪದ ಹಿಂಸೆಯ ಸ್ವರೂಪವನ್ನು ಗಮನಿಸಿದಾಗ ಅಹಿಂಸಾತತ್ತ್ವವೊಂದೇ ಹಿಂಸೆಗೆ ಪರಿಹಾರವಾಗಲು ಸಾಧ್ಯವೇ ಎಂಬ ಪ್ರಶ್ನೆ ಚಿಂತನಶೀಲರ ಮನಸ್ಸನ್ನು ಕಾಡದಿರದು. ಈ ದೃಷ್ಟಿಯಿಂದ ಹಿಂಸೆ-ಅಹಿಂಸೆ ಕುರಿತು ವಿವೇಚನೆ ಅಪೇಕ್ಷಣೀಯ.

ಈ ಪ್ರಪಂಚ ದ್ವಂದ್ವಾತ್ಮಕವಾಗಿದೆ. ಇಲ್ಲಿ ಹಗಲು-ರಾತ್ರಿ, ಸುಖ-ದುಃಖ, ಶೀತ-ಉಷ್ಣಗಳಿರುವಂತೆ, ಪ್ರೀತಿ-ದ್ವೇಷ, ಸಹಕಾರ-ಸಂಘರ್ಷ ಮುಂತಾದುವೂ ಇವೆ. ಹಾಗೆಯೇ, ಪ್ರಕೃತಿಯಲ್ಲಿ ಅಹಿಂಸೆಯಿರುವಂತೆ ಹಿಂಸೆಯೂ ಇದೆ. ಒಂದು ಮಗು ಹುಟ್ಟುವಾಗ ತಾಯಿಗೆ ಪ್ರಸವವೇದನೆಯ ಹಿಂಸೆಯಿದ್ದರೆ, ಜೀವನದುದ್ದಕ್ಕೂ ರೋಗ, ಅಪಘಾತ, ವೃದ್ಧಾಪ್ಯ, ಸಾವುಗಳ ಹಿಂಸೆ ಇದೆ. ಪ್ರಕೃತಿ ಪ್ರಕೋಪವುಂಟಾದಾಗ ಕೋಟ್ಯಂತರ ಜೀವಿಗಳು ಹಿಂಸೆಗೊಳಗಾಗುತ್ತವೆ. ಇದೆಲ್ಲಾ ಅನಿವಾರ್ಯ, ಅಪರಿಹಾರ್ಯ. ಆದರೆ ಪ್ರಕೃತಿಯಲ್ಲಿ, ವಿಶೇಷತಃ ಪ್ರಾಣಿಗಳಲ್ಲಿ, ತಮ್ಮ ಜೀವರಕ್ಷಣೆ, ಆಹಾರ, ಸಂತಾನ ಮುಂತಾದ ಕೆಲವು ಮೂಲಭೂತ ಆವಶ್ಯಕತೆಗಳ ತಾತ್ಕಾಲಿಕ ಪೂರೈಕೆಗಾಗಿ ಮಾತ್ರ ಹಿಂಸೆ ಸೀಮಿತವಾಗಿರುತ್ತದೆ. ಅದರಿಂದ ಹೆಚ್ಚು ಅನಾಹುತವಿಲ್ಲ, ಅನ್ಯಾಯವಿಲ್ಲ, ಆದರೂ ಇಲ್ಲಿ ಹಿಂಸೆ ಇರುವುದು ನಿಜ. ಮನುಷ್ಯನ ಕಾಮ, ಕ್ರೋಧ, ಲೋಭ, ಮೋಹಗಳಿಗೆ ಮಿತಿಯೇ ಇಲ್ಲ, ತೃಪ್ತಿಯೂ ಇಲ್ಲ, ಅಲ್ಲದೆ ತನ್ನ ಕುಟುಂಬ, ಜಾತಿ, ಧರ್ಮ, ನಂಬಿಕೆ, ಸಿದ್ಧಾಂತ, ಮಹತ್ವಾಕಾಂಕ್ಷೆ ಮುಂತಾದ ಕಾರಣಗಳಿಗಾಗಿ ಆತ ಹಿಂಸೆಯಲ್ಲಿ ತೊಡಗುತ್ತಾನೆ. ಈ ಹಿಂಸೆ ಪ್ರಪಂಚದ ಇತಿಹಾಸದಲ್ಲಿ ಎಷ್ಟು ಅಪಾರ ಪ್ರಮಾಣದಲ್ಲಿ ಸಾವಿರಾರು ವರ್ಷಗಳಿಂದ ನಡೆಯುತ್ತ ಬಂದಿದೆ ಎನ್ನುವುದಕ್ಕೆ ವಿವರಣೆ ಬೇಕಿಲ್ಲ. ಅದು ಬಹುತೇಕ ಅನಗತ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಎಲ್ಲ ಬಗೆಯ ಹಿಂಸೆಗಳನ್ನೂ ಅನಗತ್ಯವೆಂದು ತಳ್ಳಿಹಾಕುವಂತಿಲ್ಲ! ಏಕೆಂದರೆ ಕೆಲವು ಸಂದರ್ಭಗಳಲ್ಲಿ, ಸನ್ನಿವೇಶಗಳಲ್ಲಿ ಹಿಂಸೆ ಅನಿವಾರ್ಯವಾಗುತ್ತದೆ. ಅನ್ಯಾಯದ ಹಿಂಸೆಯನ್ನು ತಡೆಯುವುದಕ್ಕಾಗಿಯೇ ಪ್ರತಿ ಹಿಂಸೆಯನ್ನು ಪ್ರಯೋಗಿಸಬೇಕಾಗಬಹುದು. ಅಂಥ ಸಂದರ್ಭಗಳಲ್ಲಿ ಸೂಕ್ಷ್ಮ ವಿವೇಚನೆ ಅವಶ್ಯವಾಗುತ್ತದೆ.

ಈ ಪ್ರಪಂಚದಲ್ಲಿರುವ ಎಲ್ಲರೂ ಪ್ರಾಮಾಣಿಕರೂ, ಸತ್ಯವಂತರೂ, ಜಿತೇಂದ್ರಿಯರೂ ಆಗಿದ್ದು, ಬುದ್ಧ, ಮಹಾವೀರ, ಏಸು, ಗಾಂಧಿಜಿಯಂತಹವರಾಗಿದ್ದರೆ ಹಿಂಸೆಯ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಆದರೆ ದುರ್ದೈವವಶಾತ್ ವಾಸ್ತವ ಸ್ಥಿತಿ ಹಾಗಿಲ್ಲ. ಅಂತಹ ಸಜ್ಜನರು ಇದ್ದರೂ ಅಲ್ಪಸಂಖ್ಯಾತರಾಗಿದ್ದಾರೆ. ಬಹುಸಂಖ್ಯೆಯ ಮನುಷ್ಯರು ತಮಗೆ ಬೇಕಾದುದನ್ನು ಪಡೆಯುವುದಕ್ಕಾಗಿ, ತಮ್ಮ ಸ್ವಾರ್ಥಕ್ಕಾಗಿ ಅನ್ಯರನ್ನು ಹಿಂಸಿಸಲು ಹಿಂಜರಿಯದಿರುವುದೂ ಅಷ್ಟೇ ಸತ್ಯ. ಹಿಂಸೆಯ ವಿಧಾನ, ಪ್ರಮಾಣ ಬೇರೆ ಬೇರೆ ಇರಬಹುದು. ಅದು ಆಯಾ ವ್ಯಕ್ತಿಯ ಸ್ವಭಾವ, ಸಂದರ್ಭ, ಸಾಮರ್ಥ್ಯಗಳನ್ನು ಅವಲಂಬಿಸಿರುತ್ತದೆ. ಇದು ಸಾಮಾನ್ಯ ವರ್ಗ. ಶಿಕ್ಷೆಯ ಭಯವಿರುವುದರಿಂದಲೇ ಇವರು ತಮ್ಮ ಹಿಂಸಾಪ್ರವೃತ್ತಿಯನ್ನು ಆದಷ್ಟು ನಿಗ್ರಹಿಸಿಕೊಂಡಿರುತ್ತಾರೆ.

ಇನ್ನೊಂದು ವರ್ಗವಿದೆ. ಅವರು ಕೊಲೆ, ಸುಲಿಗೆ, ಕಳ್ಳತನ, ಅತ್ಯಾಚಾರ ಮುಂತಾದ ದುಷ್ಕೃತ್ಯಗಳನ್ನೇ ಜೀವನವಿಧಾನವಾಗಿ, ವೃತ್ತಿಯಾಗಿ ಮಾಡಿಕೊಂಡವರು. ಇವರು ಶಿಕ್ಷೆಯಿಂದಲೂ ತಪ್ಪಿಸಿಕೊಳ್ಳುವ ಸಾಮರ್ಥ್ಯವುಳ್ಳ ದುಷ್ಟರು. ನೈತಿಕತೆಯನ್ನೇ ನಿರಾಕರಿಸುವ ಭ್ರಷ್ಟರು. ಇಂಥವರು ಎಲ್ಲಾ ಕಾಲಗಳಲ್ಲಿ, ಎಲ್ಲ ದೇಶಗಳಲ್ಲಿ ಇರುತ್ತಾರೆ. ಅನ್ಯಾಯ, ಹಿಂಸೆ, ಕೊಲೆ, ಅತ್ಯಾಚಾರಗಳನ್ನು ಅವ್ಯಾಹತವಾಗಿ ನಡೆಸುತ್ತಲೇ ಇರುತ್ತಾರೆ. ಇಂತಹ ದುಷ್ಟರನ್ನು ಅಹಿಂಸೆಯ ಉಪದೇಶ ನಿಗ್ರಹಿಸಬಲ್ಲುದೆ? ಗೌತಮ ಬುದ್ಧನು ಅಂಗುಲಿಮಾಲನನ್ನು ಪರಿವರ್ತಿಸಿದಂತೆ, ಕೆಲವು ಮಹಾತ್ಮರು ಕೆಲವು ಹಿಂಸಕರನ್ನು ಅಹಿಂಸೆಯಿಂದ ಪರಿವರ್ತಿಸಿದರೆಂದ ಮಾತ್ರಕ್ಕೆ ಎಲ್ಲ ಸಂದರ್ಭಗಳಲ್ಲೂ ಅಹಿಂಸೆಯನ್ನು ಸಾರಾಸಗಟಾಗಿ ಪ್ರಯೋಗಿಸಿದರೆ ಅದು ಸಫಲವಾಗಲಾರದು. ಹಾಗೆ ಸಫಲವಾಗುವುದಾಗಿದ್ದರೆ ಪ್ರಪಂಚದಲ್ಲಿ ಹಿಂಸೆ ಎಂದೋ ಮಾಯವಾಗಿರುತ್ತಿತ್ತು. ನ್ಯಾಯಾಲಯಗಳು, ಪೋಲಿಸು, ಸೈನ್ಯ ಇವುಗಳ ಅಗತ್ಯವೇ ಇರುತ್ತಿರಲಿಲ್ಲ. ಆದರೆ, ವಾಸ್ತವ ಸ್ಥಿತಿ ಹಾಗಿದೆಯೇ?

ಪ್ರತಿಹಿಂಸೆ, ಸೇಡು, ಪ್ರತೀಕಾರ ಖಂಡಿತಾ ಒಳ್ಳೆಯದಲ್ಲ ನಿಜ. ಆದರೆ ಎಲ್ಲ ಸಂದರ್ಭಗಳಲ್ಲೂ ಅಪ್ರತೀಕಾರದ ಆದರ್ಶವನ್ನು ಅನುಸರಿಸುವುದು ಉಚಿತವಾಗಲಾರದು. ಅಷ್ಟೇ ಅಲ್ಲ, ಅದು ವ್ಯಕ್ತಿಗಳಿಗೂ, ಸಮಾಜಕ್ಕೂ ಅಪಾಯಕಾರಿಯಾಗಲೂ ಬಹುದು. ದರೋಡೆಕೋರನೊಬ್ಬ ಸದ್ಗೃಹಸ್ಥನ ಮನೆಗೆ ನುಗ್ಗಿದರೆ ಅವನನ್ನು ಹಿಮ್ಮೆಟ್ಟಿಸಲು ಹಿಂಸಾತ್ಮಕವೂ ಆದ ಎಲ್ಲ ಪ್ರಯತ್ನಗಳನ್ನು ಮಾಡದೆ ಅಹಿಂಸಾವ್ರತ ಅನುಸರಿಸುವುದು ದುಷ್ಕೃತ್ಯವನ್ನು ಪ್ರೋತ್ಸಾಹಿಸಿದಂತಾಗುವುದಿಲ್ಲವೆ? ಒಂದು ಬಲಿಷ್ಠ ದೇಶ ಇನ್ನೊಂದು ದೇಶದ ಮೇಲೆ ಆಕ್ರಮಣ ಮಾಡಿದಾಗ **ಅಹಿಂಸಾ ಪರಮೋ ಧರ್ಮಃ** ಎಂದು ಸೈನಿಕ ಕಾರ್ಯಾಚರಣೆ ಮಾಡದಿರುವುದು ಉಚಿತವಾದೀತೆ? ಹಾಗೆ ಮಾಡಿದರೆ ಆಕ್ರಮಣಕಾರರಿಂದ ದೇಶದ ಜನರ ಹತ್ಯೆ, ಹಿಂಸೆ, ಅತ್ಯಾಚಾರ ಮತ್ತು ಸ್ವಾತಂತ್ರ್ಯಹರಣವಾಗುವುದಿಲ್ಲವೆ? ಇಂತಹ ಸಂದರ್ಭಗಳಲ್ಲಿ ಪ್ರತಿಹಿಂಸೆ ಅನಿವಾರ್ಯವಾಗುತ್ತದೆ, ಸಮರ್ಥನೀಯವಾಗುತ್ತದೆ, ಪವಿತ್ರ ಕರ್ತವ್ಯವಾಗುತ್ತದೆ, ಧರ್ಮಸಮ್ಮತವಾಗುತ್ತದೆ, ನ್ಯಾಯವಾಗುತ್ತದೆ. ನಿರಪರಾಧಿಗಳ ಬರ್ಬರ ಹತ್ಯೆ, ಸ್ವತ್ತುಗಳ ಅಪಹರಣ, ಸ್ತ್ರೀಯರ ಮೇಲಿನ ಅತ್ಯಾಚಾರ ಮುಂತಾದ ದುಷ್ಕೃತ್ಯಗಳನ್ನು ತಡೆಯುವುದಕ್ಕಾಗಿ ಮಾಡುವ ಹೋರಾಟ ಹಿಂಸಾತ್ಮಕವಾದರೂ ಪುಣ್ಯಕಾರ್ಯವೇ ಆಗುತ್ತದೆ. ಅಂಥ ಕಾರ್ಯ ಮಾಡುವವರು ಇತರರ ಒಳಿತಿಗಾಗಿ ತಮ್ಮನ್ನು ಬಲಿದಾನ ಮಾಡುವ ತ್ಯಾಗಿಗಳೆನಿಸಿಕೊಳ್ಳುತ್ತಾರೆ.

ಆತ್ಮರಕ್ಷಣೆಗಾಗಿ ಹಾಗೂ ಅನ್ಯಾಯವನ್ನು ಪ್ರತಿಭಟಿಸುವುದಕ್ಕಾಗಿ ಹಿಂಸೆಯ ಅನಿವಾರ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಮನೆಗೆ ಬೆಂಕಿಯಿಡುವವನು, ವಿಷವುಣಿಸುವವನು, ಶಸ್ತ್ರಹಿಡಿದು ಆಕ್ರಮಿಸುವವನು, ಪರಸ್ತ್ರೀ, ಪರಧನ ಅಪಹರಿಸುವವನು—ಇವರನ್ನು ಶಾಸ್ತ್ರ ಕಠಿಣ ಶಿಕ್ಷೆಗೆ ಅರ್ಹನಾದ **ಆತತಾಯಿನ್** ಎಂದು ಕರೆಯುತ್ತದೆ. ಇಂತಹವರಿಗೆ ಕಠಿಣ ಶಿಕ್ಷೆ ನೀಡುವುದು ನ್ಯಾಯವ್ಯವಸ್ಥೆಯ ಕರ್ತವ್ಯ. ಇದು ಶಿಕ್ಷೆಯಲ್ಲ, ಅಪರಾಧದ ದಾರಿ ಹಿಡಿದವರಲ್ಲಿ ಶಿಕ್ಷೆಯ ಭಯವನ್ನು ಹುಟ್ಟಿಸಿ ತನ್ಮೂಲಕ ಅವರನ್ನು ಸರಿದಾರಿಗೆ ತರುವ ಶಿಕ್ಷಣ. ಇದು ಸಮಾಜದ ಹಿತದೃಷ್ಟಿಯಿಂದ ಅತ್ಯಗತ್ಯ. ಆಧುನಿಕ ನ್ಯಾಯಶಾಸ್ತ್ರದಲ್ಲೂ ಇದಕ್ಕೆ deterrent punishment ಎಂಬ ನೆಲೆಯಲ್ಲಿ ಸಮ್ಮತಿ ಇದೆ. ಏಕೆಂದರೆ ಶಿಕ್ಷೆಯ ಭಯವೇ ಬಹುತೇಕ ಜನರನ್ನು ಸಜ್ಜನರನ್ನಾಗಿಸುತ್ತದೆ."ಯಾರೂ ಹಿಂಸೆ ಮಾಡಬಾರದು, ಅಹಿಂಸೆಯೇ ಪರಮ ಧರ್ಮ" ಎಂಬ ನಿಲುವಿನಿಂದ "ಇನ್ನೊಂದು ವಾರ ಪೋಲಿಸ್ ಖಾತೆ ನಿಷ್ಕ್ರಿಯವಾಗಿರುತ್ತದೆ", ಎಂದು ಮಾಧ್ಯಮಗಳ ಮುಖಾಂತರ ಸರಕಾರ ಘೋಷಿಸಿದರೆ ಅಪರಾಧಗಳು ನಡೆಯುವುದಿಲ್ಲವೆ?

ಅನ್ಯಾಯದ ವಿರುದ್ಧ ಹೋರಾಡುವುದು ಪ್ರತಿಯೊಬ್ಬನ ಶ್ರೇಷ್ಠ ಕರ್ತವ್ಯವೂ ಹೌದು. ಆ ಕರ್ತವ್ಯನಿರ್ವಹಣೆ ಹಿಂಸೆ ಎನಿಸಿದರೂ ಅಥವಾ ಹಿಂಸೆಗೆ ಕಾರಣವಾದರೂ ಅದರ ದೋಷ ವ್ಯಕ್ತಿಗೆ ಅಂಟದು. ಏಕೆಂದರೆ ಅಲ್ಲಿ ಸ್ವಾರ್ಥಸಾಧನೆ ಇಲ್ಲ. ನಿಃಸ್ವಾರ್ಥ ಕರ್ತವ್ಯನಿಷ್ಠೆ ಇದೆ. ಅದು 'ಧರ್ಮ', ಎಂದರೆ ಧರ್ಮಸಮ್ಮತವಾದ ಕರ್ತವ್ಯಕರ್ಮ. ಅಂಥ ಧರ್ಮವನ್ನು ಆಚರಿಸದಿರುವುದೇ ಪಾಪ. ಕೊಲೆಗಡುಕನನ್ನು ಗಲ್ಲಿಗೇರಿಸುವವನು ತನ್ನ ಕರ್ತವ್ಯ ಮಾಡಿದರೆ, ಅವನಿಗೆ ಕೊಲೆಯ ಅಥವಾ ಹಿಂಸೆಯ ದೋಷ ಅಂಟುವುದಿಲ್ಲ. ಈ ಸಂದರ್ಭದಲ್ಲಿ ಕನ್ನಡದ ಕವಿಗಳೋರ್ವರ ಒಂದು ಪದ್ಯವನ್ನು ಗಮನಿಸಬಹುದಾಗಿದೆ:

**ಹಿಂಸೆ ಕೂಡದು, ಹಿಂಸೆ ಬೇಕು**
**ಶಸ್ತ್ರಕ್ರಿಯಾನಿರತ ಪರಶು ಮಸೆಯಲಿ ಅರೆದ ಸಾಣೆಯಲ್ಲಿ,**
**ಕಾರ್ತವೀರ್ಯನ ಛಿನ್ನ-ಭಿನ್ನ ಬಾಹುಸಹಸ್ರದ ವಿಪಾಕ**
**ತಪೋವನ ಸಹಸ್ರದಾರೋಗ್ಯದ ಶಕ.**

ಇದರಲ್ಲಿ ಪರಶುರಾಮ, ಕಾರ್ತವೀರ್ಯರ ಕಥೆಯನ್ನು ಸಾಂಕೇತಿಕವಾಗಿ ಇರಿಸಿಕೊಂಡು ಹಿಂಸೆ–ಅಹಿಂಸೆಗಳ ವಿವೇಚನೆ ಮಾಡಲಾಗಿದೆ. ಸಾಮಾನ್ಯವಾಗಿ ಹಿಂಸೆ ಕೂಡದು. ಆದರೆ ಕೆಲವು ಸಂದರ್ಭಗಳಲ್ಲಿ ಅದು ಶಸ್ತ್ರಚಿಕಿತ್ಸೆಯಂತೆ ಅನಿವಾರ್ಯವಾಗಬಹುದು. ತನ್ನ ಪಾಡಿಗೆ ಕಾಡಿನಲ್ಲಿ ಆಶ್ರಮ ಕಟ್ಟಿಕೊಂಡು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದ ಋಷಿ ಜಮದಗ್ನಿಯ ಸ್ವತ್ತನ್ನು (ಗೋವು) ಬಲಾತ್ಕಾರದಿಂದ ಪಡೆಯುವ ಉದ್ದೇಶ

ದಿಂದ ಅವನನ್ನೂ ಅವನ ಶಿಷ್ಯರನ್ನೂ ಹಿಂಸಿಸಿ ಬರ್ಬರ ಹತ್ಯೆ ಮಾಡಿದ ದುಷ್ಟರಾಜ ಕಾರ್ತವೀರ್ಯನನ್ನೂ ಅವನಂಥ ಇತರ ದುಷ್ಟ ಕ್ಷತ್ರಿಯರನ್ನೂ ಸಂಹರಿಸುವುದು ಪರಶುರಾಮನಿಗೆ ಅನಿವಾರ್ಯವಾಯಿತು. ಇದು ತಪೋವನಗಳನ್ನು ಕಾಪಾಡಲು ಮಾಡಿದ ಶಸ್ತ್ರಕ್ರಿಯೆ. ಇಂತಹ ಸಂದರ್ಭಗಳಲ್ಲಿ ಹಿಂಸಾತ್ಮಕ ಕಾರ್ಯಾಚರಣೆ ಅವಶ್ಯವಾಗುತ್ತದೆ. ಆಧುನಿಕ ಕಾಲದ ಮೇಧಾವಿಗಳು, ಶಾಂತಿಪ್ರಿಯರು ಹೀಗೆಯೇ ಈ ಸಮಸ್ಯೆಯನ್ನು ಎದುರಿಸಿದ ನಿದರ್ಶನಗಳುಂಟು. ಗಾಂಧಿಜೀಯವರೇ ಒಮ್ಮೆ ಹೇಡಿತನದ ಅಹಿಂಸೆಗಿಂತ ಹಿಂಸೆಯೇ ವಾಸಿ ಎಂದಿದ್ದರು. ಅರವತ್ತು ಲಕ್ಷ ಮಂದಿ ಯಹೂದ್ಯರನ್ನು ಬರ್ಬರವಾಗಿ ಹಿಂಸಿಸಿ ಹತ್ಯೆ ಮಾಡಿಸಿದ ಹಿಟ್ಲರ್ ಎರಡನೆಯ ಮಹಾಯುದ್ಧದಲ್ಲಿ ಅಕ್ಕಪಕ್ಕದ ರಾಷ್ಟ್ರಗಳನ್ನು ಆಕ್ರಮಿಸಿ, ಜಯಿಸಿ, ಲೋಕಕಂಟಕನಾಗಿ ವಿಜೃಂಭಿಸುತ್ತಿದ್ದಾಗ, ಶ್ರೇಷ್ಠ ವಿಜ್ಞಾನಿಗಳಾಗಿದ್ದ ಐನ್‌ಸ್ಟೈನ್ ಹಾಗೂ ನೀಲ್ಸ್ ಬೋರ್ ಅವರೇ ಹಿಟ್ಲರ್‌ನನ್ನು ನಿಗ್ರಹಿಸುವುದಕ್ಕಾಗಿ ಅವನಿಗಿಂತ ಮೊದಲೇ ಅಣುಬಾಂಬು ತಯಾರಿಸಿಟ್ಟುಕೊಳ್ಳಬೇಕೆಂದು ಸೂಚಿಸಿ ಅಮೆರಿಕದ ಅಧ್ಯಕ್ಷರಿಗೆ ಪತ್ರ ಬರೆದಿದ್ದರು. ಅವರೇನು ಹಿಂಸಾವಾದಿಗಳಾಗಿರಲಿಲ್ಲ. ಶಾಂತಿಪ್ರಿಯರೇ ಆಗಿದ್ದರು. ಅಣುಬಾಂಬಿನಿಂದ ಆಗಬಹುದಾದ ಹಿಂಸೆಯ ಸ್ವರೂಪವನ್ನು ಬಲ್ಲವರಾಗಿದ್ದರು. ಆದರೂ ಅನಿವಾರ್ಯವಾಗಿ ಅಣುಬಾಂಬನ್ನು ಸಮರ್ಥಿಸಬೇಕಾಯಿತು. ಜೀವನದಲ್ಲಿ ೧೦೦% ಒಳ್ಳೆಯ ಅಥವಾ ೧೦೦% ಕೆಟ್ಟ ಸಂಗತಿಗಳ ಆಯ್ಕೆಯೇ ಎದುರಾಗಬೇಕಾಗಿಲ್ಲ. ಎರಡು ಕೆಟ್ಟ ಸಂಗತಿಗಳಲ್ಲಿ ಹೆಚ್ಚು ಕೆಟ್ಟದ್ದನ್ನು ಬಿಟ್ಟು ಕಡಿಮೆ ಕೆಟ್ಟದನ್ನು (lesser evil) ಆರಿಸಿಕೊಳ್ಳಬೇಕಾಗುತ್ತದೆ. ಬೇರೆ ಮಾರ್ಗವೇ ಇಲ್ಲ.

ಅರ್ಜುನನಿಗೆ ಶ್ರೀಕೃಷ್ಣ "ಯುದ್ಧವನ್ನು ಮಾಡು" ಎಂದು ಭಗವದ್ಗೀತೆಯಲ್ಲಿ ಹಲವು ಬಾರಿ ಬೋಧಿಸುವುದಕ್ಕೆ ಕಾರಣವೂ ಇದೇ ಹಿನ್ನೆಲೆಯದು. ಶ್ರೀಕೃಷ್ಣ ಯುದ್ಧಾಸಕ್ತನಲ್ಲ. ಆತ ಶಾಂತಿ ದೂತನಾಗಿಯೇ ದುರ್ಯೋಧನನೊಡನೆ ಸಂಧಾನಕ್ಕೆ ಹೋಗಿದ್ದ. ಯುದ್ಧವನ್ನು ತಪ್ಪಿಸಲು ಶತಪ್ರಯತ್ನ ಮಾಡಿದ್ದ, ಪಾಂಡವರಿಗೆ ನ್ಯಾಯವಾಗಿ ಸಲ್ಲಬೇಕಾದ ಅರ್ಧ ರಾಜ್ಯದ ಬದಲು ಐದು ಗ್ರಾಮಗಳನ್ನು ನೀಡಿದರೂ ಸಾಕೆಂದ. ಆದರೆ ಮೂರ್ಖ ದುರ್ಯೋಧನ ಯುದ್ಧವೇ ಬೇಕೆಂದು ಹಠಹಿಡಿದ. ಯುದ್ಧವನ್ನು ಪಾಂಡವರ ಮೇಲೆ ಹೇರಿದ. ಹೀಗಾಗಿ ಯುದ್ಧ ಪಾಂಡವರ ಪಾಲಿಗೆ ಅನಿವಾರ್ಯ ಕರ್ತವ್ಯವಾಯಿತು, ಧರ್ಮಸಮ್ಮತ ಯುದ್ಧವಾಯಿತು. ಸ್ವಜನಮೋಹದಿಂದ ಅರ್ಜುನ ಯುದ್ಧದಿಂದ ಹಿಂಜರಿದಾಗ ಶ್ರೀಕೃಷ್ಣ ಅವನ ಹೃದಯದೌರ್ಬಲ್ಯವನ್ನು ಕಿತ್ತೊಗೆದು ಹೋರಾಡಲು ಪ್ರೇರೇಪಿಸಬೇಕಾಯಿತು. ಇದು ಲೌಕಿಕ ದೃಷ್ಟಿಯ ಸಮಾಧಾನ.

ಶ್ರೀಕೃಷ್ಣನ ಉಪದೇಶದಲ್ಲಿ ಅಪ್ರಿಯವೂ, ಘೋರವೂ ಎಂದು ಕಾಣುವ ಕರ್ತವ್ಯವನ್ನು ಸಹ ಆಧ್ಯಾತ್ಮಿಕ ದೃಷ್ಟಿಯಿಂದ ನೆರವೇರಿಸುವ ವಿಧಾನವು ಅಂತರ್ಗತವಾಗಿದೆ. ಮನುಷ್ಯನ ನೈಜ ಸ್ವಭಾವದ ಪರಿಚಯದಿಂದ ಬರುವ ಕರ್ತವ್ಯ ನಿರ್ವಹಣೆಗೆ ಸಂಬಂಧಿಸಿದ ಪೂರ್ಣದೃಷ್ಟಿ ಅದು. ಮನುಷ್ಯನು ಕೇವಲ ದೇಹವಲ್ಲ, ದೇಹಧಾರಿಯಾದ ಜೀವಾತ್ಮ. ಜೀವಾತ್ಮನ ನಿಜವಾದ ಆಧ್ಯಾತ್ಮಿಕ ಉನ್ನತಿ ಅಥವಾ ಸ್ವಾತಂತ್ರ್ಯ, ತನ್ನ ಪಾಲಿನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನೆರವೇರಿಸುವುದರಿಂದಲೆ ಸಾಧ್ಯ. ಯಾವ ಕೆಲಸವೂ ಕೀಳಲ್ಲ. ತನ್ನ ಪಾಲಿಗೆ ಬಂದ ಕೆಲಸವನ್ನು ಅದರ ಫಲಗಳೊಂದಿಗೆ ದೇವರಿಗೆ ಅರ್ಪಿಸುತ್ತೇನೆ, ಆತನ ಇಚ್ಛೆಯಂತೆ ನಡೆಯಲಿ ಎಂಬ ದೃಷ್ಟಿಯಿಂದ ಎಲ್ಲ ಕೆಲಸಗಳನ್ನೂ ಮಾಡಿ ಸಮರ್ಪಿಸಿದಾಗ ದಿವ್ಯವಾದ ಗುರಿ ತಲುಪಲು ಸಾಧ್ಯವಾಗುತ್ತದೆ. **ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ** ಧರ್ಮಸಮ್ಮತವಾದ ಯುದ್ಧವನ್ನು ಮಾಡದಿದ್ದಲ್ಲಿ ಪಾಪವೇ ಉಂಟಾಗುವುದು ಎಂದು ಭಗವಂತ ಅರ್ಜುನನನ್ನು ಹುರಿದುಂಬಿಸುತ್ತಾನೆ. ಸ್ವಕರ್ಮದಿಂದ ಭಗವಂತನ ಪೂಜೆಯೇ ಸಿದ್ಧಿಗೆ ಸೋಪಾನ. ಇದು ಗೀತೆಯ ಮೂಲಭಾವ. ಸೈನಿಕನ ಕೆಲಸ ನಿಕೃಷ್ಟವಲ್ಲ, ರಾಜನ ಕೆಲಸ ಹಿರಿದಲ್ಲ. ಎಲ್ಲರೂ ಅವರವರ ಸ್ಥಾನದಲ್ಲಿದ್ದು ತಮಗೆ ಒದಗಿ ಬಂದಿರುವ ಕರ್ತವ್ಯವನ್ನು ಮಾಡಬೇಕು. ಹಾಗಾದರೆ ಮಾತ್ರ ಸಮಾಜ ಸುಸ್ಥಿತಿಯಲ್ಲಿ ಇರಲು ಸಾಧ್ಯ. ಹಲವರ ಹಿತಕ್ಕಾಗಿ ಕೆಲವರ ತ್ಯಾಗ ಅನಿವಾರ್ಯವೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಹೂವು ಸತ್ತು ಹಣ್ಣಾಗುತ್ತದೆ ಎಂದು ಭಾವಿಸುವುದಕ್ಕಿಂತ, ಬೀಜ ಸತ್ತು ಮರ ಹೊಮ್ಮುತ್ತದೆ ಎನ್ನುವುದಕ್ಕಿಂತ ಅದರ ಪೂರ್ಣ ಅಭಿವ್ಯಕ್ತಿ ಹಣ್ಣಿನಲ್ಲಿ ಆಯಿತು, ಮರದಲ್ಲಿ ಆಯಿತು ಎಂದು ಭಾವಿಸೋಣ. ಆಗ ಎಲ್ಲವೂ ಸಮಂಜಸ, ಅರ್ಥಯುಕ್ತವೆಂಬ ಪೂರ್ಣದೃಷ್ಟಿ ನಮ್ಮದಾಗುತ್ತದೆ. ✪

**ಅಹಿಂಸೆ ಆತ್ಮಘಾತಕವಾಗದಂತೆ ನೋಡಿಕೊಳ್ಳುವ ನಿರಂತರ ಪರಿಜ್ಞಾನ, ಜಾಣ್ಮೆ ವ್ಯಕ್ತಿಗಿರಬೇಕು.**

—ಸಿ.ಪಿ.ಕೆ.

## ಆಶ್ರಮದ ವಿಶೇಷ ಉತ್ಸವದ ದಿನಗಳು

**ಮೇ ೨೦೦೬**

| | | |
|---|---|---|
| ೦೨ | ಮಂಗಳವಾರ | ಶ್ರೀಶಂಕರ, ಶ್ರೀ ರಾಮಾನುಜ ಜಯಂತಿ |
| ೦೯ | ಮಂಗಳವಾರ | ಏಕಾದಶಿ |
| ೧೩ | ಶನಿವಾರ | ಬುದ್ಧಪೂರ್ಣಿಮಾ |
| ೨೩ | ಮಂಗಳವಾರ | ಏಕಾದಶಿ |